VIJAYAKUMAR KANNUR
Digitally signed by VIJAYAKUMAR KANNUR
Date: 2026.01.17 16:59:26 +0530



**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 17.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ: ದೂರುದಾರ ಪರ ಶ್ರೀ ಎಸ್ ಬಿ ಡಿ ವಕೀಲರಿಂದ</u>**

1. ಆರೋಪಿಯು ದಿಃ 26.02.2024 ರಂದು ಬರೆದುಕೊಟ್ಟಂತಹ ರೂ. 500/- ಇ ಸ್ಟಾಂಪ ಪೇಪರ ಮೇಲಿನ ಕೈಗಡ ಪತ್ರವನ್ನು ನಿಪಿ **6** ಎಂದು ಅದರ ಮೇಲಿನ ಆರೋಪಿಯ ಸಹಿಯನ್ನು ನಿಪಿ 6 ಮತ್ತು ನಿಪಿ 6 ಬಿ ಎಂದು ಗುರುತಿಸಲಾಯಿತು. ವೈಶಾಲಿ ತಲಾಟಿ ಎಂಬ ಸಾಕ್ಷಿದಾರರ ಸಹಿಯನ್ನು ನಿಪಿ 6 ಸಿ ಎಂದು ಗುರುತಿಸಲಾಯಿತು. ಗೀತಾ ನಾವಿ ಎಂಬುವವರ ಸಹಿಯನ್ನು ನಿಪಿ 6 ಡಿ ಎಂದು ಗುರುತಿಸಲಾಯಿತು. ದಸ್ತೂರು ಬರಹಗಾರರ ಸಹಿಯನ್ನು ನಿಪಿ 6 ಇ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಸ್ ಜೆ ವಕೀಲರಿಂದ :</u>**

ಆರೋಪಿಯ ಪರಿಚಯ ನನಗೆ ಮೊದಲಿನಿಂದಲೂ ಇರುವುದು. ನಾನು ಶಾಲೆ ಕಲೆಯುವ ದಿನದಿಂದಲೂ ಆರೋಪಿಯ ಹತ್ತಿರ ನಾನು ಬಟ್ಟೆ ಹೊಲಿಸಲು ಹೋದಾಗ ಪರಿಚಯವಾಗಿರುವುದು. ಆರೋಪಿ ಟೇಲರಿಂಗ್ ಉದ್ಯೋಗ ಮಾಡುತ್ತಿರುವನು. ಇಷ್ಟನ್ನು ಹೊರತು ಪಡಿಸಿ ನನಗೆ ಬೇರೆ ಪರಿಚಯ ಇರುವುದಿಲ್ಲ. ನನಗೆ ದೂರದ ಸಂಬಂಧಿಯಾಬೇಕು. ಆರೋಪಿ ನನ್ನ ತಾಯಿ ನಂದಾಳ 2ನೇ ಗಂಡನಾಗಿರುವನು. ನನ್ನ ತಾಯಿಯ ಹೆಸರಿನಲ್ಲಿ ಇರುವ ದಾಖಲೆಗಳಲ್ಲಿ ಹೆಸರು ಬದಲಾವಣೆ ಆಗಿರುವುದು ಎಂದರೆ ಸರಿ. ಆರೋಪಿ ಮತ್ತು ನನ್ನ ತಾಯಿಯ ಮಧ್ಯ ಆದ ವಿವಾಹವು ಬೀಳಗಿಯ ಉಪ ನೊಂದಣಿ ಕಚೇರಿಯಲ್ಲಿ ನೊಂದಣಿಯಾಗಿರುವುದು. ಇವರ ವಿವಾಹ ಯಾವ ದಿನಾಂಕದಂದು ಆಗಿದೆ ಎಂದು ನನಗೆ ಗೊತ್ತಿರುವುದಿಲ್ಲ.

2. ಆರೋಪಿಗೆ ಹಣವನ್ನು ದಿಃ 26.02.2024 ರಂದು ರೂ. 20 ಲಕ್ಷ ಹಣ ನಗದು ರೂಪದಲ್ಲಿ ನೀಡಿರುವೆನು. ಈ ಹಣ ನಾನು ಯಾವುದೇ ಬ್ಯಾಂಕಿನಿಂದ ತೆಗೆದುಕೊಂಡು ಬಂದಿರುವುದಿಲ್ಲ, ನಾನು ನನ್ನ ಹತ್ತಿರ ಉಳಿತಾಯ ಮಾಡಿ ಇಟ್ಟುಕೊಂಡಿರುವ ಹಣವನ್ನೇ ನೀಡಿರುವೆನು. ನಾನು ಉಳಿತಾಯ ಮಾಡಿದ ಹಣ ಆರೋಪಿಗೆ ನೀಡಿರುವುದಾಗಿ ಎಂದು ದೂರಿನಲ್ಲಿ ಹೇಳಿ ಬರೆಸಿರುವುದಿಲ್ಲ. ನಿಪಿ 6 ರ ದಾಖಲಾತಿಗೆ ಸಂಬಂಧಪಟ್ಟಂತೆ ಬಡ್ಡಿಯ ಹಣದ ವ್ಯವಹಾರದ ಲೈಸೆನ್ಸ ಇರುವುದಿಲ್ಲ. ಈ ಹಣ ಆರೋಪಿಗೆ ನೀಡುವ ಸಮಯದಲ್ಲಿ ಇಬ್ಬರು ಸಾಕ್ಷಿದಾರರು ಹಾಜರಿದ್ದರು. ನಿಪಿ 6 ರ ದಾಖಲಾತಿಯು ನೊಂದಣಿಯಾಗಿರುವುದಿಲ್ಲ ಎಂದರೆ ಸರಿ. ನಿಪಿ 6 ರ ದಾಖಲೆಯ ಮೇರೆಗೆ ಸಿವಿಲ್ ದಾವೆ ದಾಖಲು ಮಾಡಿರುವುದಿಲ್ಲ. ನಿಪಿ 1 ರ ಮೇಲಿನ ಸಹಿ ನಿಪಿ 1ಎ ಆರೋಪಿಯದಾಗಿರುವುದಿಲ್ಲ ಮತ್ತು ಆ ಚೆಕ್ ನ ಮೇಲಿನ ಬರಹ ಆರೋಪಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ ಮೇಲಿನ ಬರಹ ಮತ್ತು ನಿಪಿ 1ಎ ದ ಸಹಿಯ ಶಾಹಿಯ ಬೇರೆ ಬೇರೆಯಾಗಿರುವುದು ಎಂದರೆ ಸರಿಯಲ್ಲ.

3. ನಿಪಿ 1 ರ ಚೆಕ್ ನ್ನು ದಿಃ 12.09.2025 ಕ್ಕಿಂತ ಒಂದು ವಾರದ ಮುಂಚೆ ಆರೋಪಿ ನನಗೆ ನೀಡಿರುವನು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರ ಚೆಕ್ ಆರೋಪಿ ನನಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರ ಚೆಕ್ ನ್ನು ನನ್ನ ತಾಯಿ ಆರೋಪಿಯ ಕಡೆಯಿಂದ ತೆಗೆದುಕೊಂಡು ಬಂದು ನನಗೆ ನೀಡಿದ್ದು ಅದನ್ನು ನಾನು ದುರುಪಯೋಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ